ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸರ್ಕಾರದ ಅಧಿಸೂಚನೆ ಸಂಖ್ಯೆ ಎಲ್ಆರ್ಡಿ.87 (ಭಾಗ.3) ಬೆಂಗಳೂರು ದಿನಾಂಕ 2.8.97ರಂತೆ 25.8.97ರಿಂದ ಹೊಸದಾಗಿ ಉಡುಪಿ ಜಿಲ್ಲೆಯ ಅಸ್ತಿತ್ವಕ್ಕೆ ಬಂದಿದೆ. ಆದರೆ ಹೊಸ ಜಿಲ್ಲೆಗಳಿಗೆ 1998-99ನೇ ಆರ್ಥಿಕ ವರ್ಷದಿಂದ ಮಾತ್ರ ಸಹಾಯಧನ ಬಿಡುಗಡೆ ಮಾಡಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ಕುಂದಾಪುರ ಸಾರ್ವಜನಿಕ ಆಸ್ಪತ್ರೆಯ ಬೇಡಿಕೆಗಳನ್ನು ಪೂರೈಸುವುದು.

987 (1700)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಸಾರ್ವಜನಿಕ ಆಸ್ಪತ್ರೆಯಿಂದ ಯಾವ್ಯಾವ ಅವಶ್ಯಕತೆಗಳ ಬಗ್ಗೆ ಇಲಾಖೆಗೆ ಬಂದ ಬೇಡಿಕೆಗಳಾವುವು?

ಆ) ಹಾಗೆ ಬಂದ ಬೇಡಿಕೆಯಲ್ಲಿ ಎಷ್ಟು ಪೂರೈಸಲಾಗಿದೆ?

ಇ) ಉಳಿದ ಬೇಡಿಕೆಗಳನ್ನು ಯಾವಾಗ ಪೂರೈಸಲಾಗುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕುಂದಾಪುರ ಸಾರ್ವಜನಿಕ ಆಸ್ಪತ್ರೆಯಿಂದ ಒಟ್ಟು 113 ಸಲಕರಣೆಗಳನ್ನು ಪೂರೈಸಲು ಬೇಡಿಕೆಯು ಬಂದಿದೆ.

ಆ) ಈ ಪೈಕಿ 64 ಸಲಕರಣೆಗಳನ್ನು ಈಗಾಗಲೇ ಪೂರೈಸಲಾಗಿದೆ.

ಇ) ಈ ಯೋಜನಾ ಅವಧಿಯು 5 ವರ್ಷಗಳದ್ದಾಗಿದ್ದು ಯೋಜನೆಯ ಪ್ರಸ್ತಾವನೆಯಲ್ಲಿ ನಮೂದಿತವಾದ ಎಲ್ಲಾ ಸಲಕರಣೆಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು.

ವಿಷಯ: ಬೆಂಗಳೂರು ನಗರದಲ್ಲಿನ ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳನ್ನು ಒದಗಿಸುವುದು.